ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1	639
ಪ್ರಶ್ನೆ ಕೇಳಿರುವ ವಿಧಾನ ಸಭೆಯ ಸದಸ್ಯರು	ಪಾಟೀಲ್ಎಂ ವೈ (ಅಫ್ಜಲ್ ಪುರ್)
ಉತ್ತರ ನೀಡುವ ಸಚಿವರು	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ 1	24.07.2024

ವಿಷಯ: ಬಿಮಾ ಯೋಜನೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಅಫಜಲಪೂರ ಮತಕ್ಷೇತ್ರದಲ್ಲಿ ಅನೇಕ ಕಡೆ ರೈತರು ವಿಮೆ ಕಂತನ್ನು ಕಟ್ಟಿ ಬೆಳೆಗಳು ಫಸಲ್ ಬಿಮಾ ಯೋಜನೆಯ ಸಮೀಕ್ಷೆ ತಪ್ಪಾಗಿ ವರದಿ ಸಲ್ಲಿಸಿರುವುದರಿಂದ ರೈತರಿಗೆ ಅನ್ಯಾಯವಾಗುತ್ತಿರವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಅಫಜಲಪೂರ ಮತಕ್ಷೇತ್ರದಲ್ಲಿ ರೈತರು ವಿಮೆ ಕಂತನ್ನು ಕ ನಾಶವಾದಾಗ ಫಸಲ್ ಬಿಮಾ ಯೋಜನೆಯ ಸಮೀಕ್ಷೆ ತಪ್ಪಾಗಿ ವರದಿ ಸಲ್ಲಿಸಿರುವುದರಿಂದ ರೈತರಿಗೆ ಅನ್ಯಾಯವಾಗುತ್ತಿರವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ . ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ (PMFBY ಪರಿಷ್ಕೃತ ಮಾರ್ಗಸೂಚಿಯನ್ವಯ 2023-24 ನೇ ಸಾಲಿನಲ್ಲಿ ಅಫಜಲಪೂರ ಮತಕ್ಷೇತ್ರದಲ್ಲಿ ಒಟ್ಟು **16,808** ಅರ್ಹ ರೈತ ಪ್ರಸ್ತಾವನೆಗಳಿಗೆ ಒಟ್ಟು ರೂ.**14.93** ಕೋಟಿ ಬೆಳೆ ವಿಮೆ ಪರಿಹಾರ ಮೊತ್ತ ಮಂಜೂರಾಗಿರುತ್ತದೆ .
ಆ)	ಹಾಗಿದ್ದಲ್ಲಿ , ಆತನೂರ ಹೋಬಳಿಯಲ್ಲಿ ಬರುವ ಗುಡೂರು, ನೀಲೂರು, ಭೈರಮಡಗಿ, ಕೋಗನೂರು, ಮದರಾಬಿ, ಚೌಡಾಪುರ ಗ್ರಾಮಗಳ ಹಾಗೂ ಕಜರಗಿ ಹೋಬಳಿಯ ಇನ್ನೂ ಅನೇಕ ಗ್ರಾಮಗಳ ರೈತರಿಗೆ ಇನ್ನೂ ಪರಿಹಾರ ಸಿಗದೇ ಇರುವುದು ಸರ್ಕಾರದ ಗಮನದಲ್ಲಿದೆಯೇ :	ಸದರಿ ಯೋಜನೆಯಡಿ ಆತನೂರ ಹೋಬಳಿಯಲ್ಲಿ ಬರುವ ಗುಡೂರು, ನೀಲೂರು, ಭೈರಮಡಗಿ, ಕೋಗನೂರು, ಮದರಾಬಿ ಚೌಡಾಪುರ ಗ್ರಾಮಗಳ ಹಾಗೂ ಕಜರಗಿ ಹೋಬಳಿಯ ಗ್ರಾಮಗಳಲ್ಲಿ 2023-24 ನೇ ಸಾಲಿನಲ್ಲಿ ಒಟ್ಟು ಒಟ್ಟು **2,387** ಅರ್ಹ ರೈತ ಪ್ರಸ್ತಾವನೆಗಳಿಗೆ ರೂ.**2.46** ಕೋಟಿ ಬೆಳೆ ವಿಮೆ ಪರಿಹಾರ ಮೊತ್ತ ಮಂಜೂರಾಗಿರುತ್ತದೆ .
ಇ)	ಹಾಗಿದ್ದಲ್ಲಿ , ಸದರಿ ಪರಿಹಾರ ವಂಚಿತ ರೈತರಿಗೆ ಯಾವ	PMFBY ಮಾರ್ಗಸೂಚಿಯನ್ವಯ ನೋಂದಣಿಯಾದ ಅರ್ಹ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತ ಸಂದಾಯವಾಗುತ್ತದೆ . ಅರ್ಹ ಇಲ್ಲದ ರೈತರಿಗೆ ಬೆಳೆ

	ಕಾಲಮಿತಿಯೊಳಗೆ ಪರಿಹಾರ ನೀಡಲಾಗುವುದು? (ಪೂರ್ಣ ವಿವರ ನೀಡುವುದು)	ವಿಮೆ ಪರಿಹಾರ ಮೊತ್ತ ಪಾವತಿಸಲು ಸದರಿ ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ .

ಕೃಷಿ
ನಿರ್ದೇಶಕರು

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಕೃಷಿ ಆಯುಕ್ತರ ಕಾರ್ಯಾಲಯ, ನಂ.01, ಶೇಷಾದ್ರಿ ರಸ್ತೆ, ಬೆಂಗಳೂರು-01. ಸಂಖ್ಯೆ:ಜಕೃನಿ(ಬೆವಿ)/LAQ-639/2024-25
ದಿನಾಂಕ:18.07.2024

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಪಾಟೀಲ್ ಎಂ ವೈ
(ಅಫ್ಜಲ್ ಪುರ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ
ಸಂಖ್ಯೆ:639 ಗೆ ಉತ್ತರಿಸುವ ಕುರಿತು.
*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಪಾಟೀಲ್ ಎಂ ವೈ (ಅಫ್ಜಲ್ ಪುರ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:639 ಗೆ ಮಾಹಿತಿ ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.

ತಮ್ಮ
ವಿಶ್ವಾಸಿ,

ಕೃಷಿ
ನಿರ್ದೇಶಕರು